ಮಾಡಿದ್ದಾರೆ, ಸ್ವೀಕಾರಾರ್ಹ ಆಗಬಲ್ಲ ಒಂದು ಸಲಹೆ ಅದು. ಅಂದರೆ ನಮ್ಮ ಬ್ಯಾಂಕ್ವೆಟ್ ಹಾಲ್ ಇದೆ. ಆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಇದರ ಬಗ್ಗೆ ಚಿಂತನೆ ನಡೆಸಿ ಇವುಗಳನ್ನು ಹೇಗೆ ಅದಕ್ಕೆ ಜೋಡಿಸಬಹುದು ಎನ್ನತಕ್ಕದ್ದನ್ನು ನಾನು ಖಂಡಿತಾ ನೋಡುತ್ತೇನೆ.

ರಾಜ್ಯದಲ್ಲಿ ಮಧುಮೇಹ (ಸಕ್ಕರೆ ಕಾಯಿಲೆ) ನಿಯಂತ್ರಣ

452 (3850) ಶ್ರೀ ಹೊನ್ನಪ್ಪಳ್ಳಿ ಜಬ್ಬಾರ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಧುಮೇಹ (ಸಕ್ಕರೆ ಖಾಯಿಲೆ) ಇರುವವರ ಸಂಖ್ಯೆ ಎಷ್ಟು? ಜಿಲ್ಲಾವಾರು ಮಾಹಿತಿ ನೀಡುವುದು;

ಆ) ಮಧುಮೇಹ (ಸಕ್ಕರೆ ಖಾಯಿಲೆ) ರೋಗ ನಿಯಂತ್ರಣಕ್ಕೆ ಸರ್ಕಾರ ಮುಂಜಾಗ್ರತ ಕ್ರಮಗಳೇನು; ಜಿಲ್ಲಾವಾರು ಸಮಿತಿಗಳು ರಚಿಸಲಾಗಿದೆಯೇ;

ಇ) ಕೇಂದ್ರ ಸರ್ಕಾರದಿಂದ ಹಾಗೂ ರಾಜ್ಯ ಸರ್ಕಾರದಿಂದ ಈ ರೋಗ ನಿಯಂತ್ರಣಕ್ಕಾಗಿ ಬಂದ ಅನುದಾನ ಎಷ್ಟು; 2002-03 ಮತ್ತು 2003-04ನೇ ಸಾಲಿನ ವಿವರ ನೀಡುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಈ ಮಧುಮೇಹ ರೋಗದ ಬಗ್ಗೆ ಯಾವ ರಾಷ್ಟ್ರೀಯ ಸಮೀಕ್ಷೆ ಮಾಡಿರುವ ದಾಖಲೆಗಳು ಇಲ್ಲ.

ತಜ್ಞರ ಅಧ್ಯಯನದ ವರದಿ ಪ್ರಕಾರ ರಾಜ್ಯದ ಮತ್ತು ನಗರದ ಜನರಲ್ಲಿ ಶೇ. 7.5 ಗ್ರಾಮೀಣ ಜನರಲ್ಲಿ ಶೇ. 12.4 ಮಧುಮೇಹ ರೋಗ ಇರುವುದಾಗಿ ಅಂದಾಜು ಮಾಡಲಾಗಿದೆ.

ಆ) ಮಧುಮೇಹ ರೋಗಕ್ಕೆ ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಾದ ಜಿಲ್ಲಾ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮೂತ್ರ ಪರೀಕ್ಷೆಯ ವ್ಯವಸ್ಥೆ ಮಾಡಲಾಗಿದೆ ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಮಧುಮೇಹಕ್ಕೆ ರಕ್ತ ಪರೀಕ್ಷೆ ಮಾಡುವ ವ್ಯವಸ್ಥೆ ಇರುತ್ತದೆ. ಮಧುಮೇಹ ಕಂಡು ಬಂದವರಿಗೆ ಚಿಕಿತ್ಸೆಗೆ ಒಳಪಡಿಸಲಾಗುವುದು. 2002-2003 ರಲ್ಲಿ ಸರ್ಕಾರಿ ಔಷಧಿ ಮಳಿಗೆಯಿಂದ ಒಟ್ಟು 12,47,129 ರೂ.ಗಳು ಮತ್ತು ಏಪ್ರಿಲ್ 2003 ರಿಂದ ಇದುವರೆಗೆ 4,83,801ರೂ.ಗಳ ಔಷಧಿಗಳನ್ನು ಸರಬರಾಜು ಮಾಡಲಾಗಿದೆ. ಸಮಿತಿ ರಚಿಸುವ ಕ್ರಮ ಸದ್ಯಕ್ಕೆ ಇರುವುದಿಲ್ಲ.

ಇ) 2002-2003 ಮತ್ತು 2003-2004ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕೆ ಅನುದಾನ ಬಂದಿರುವುದಿಲ್ಲ.

11.40 ಎ.ಎಂ.

ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್: ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಇವೊತ್ತಿನ ವೈದ್ಯಕೀಯ ಮಾಹಿತಿ ಪ್ರಕಾರ ವಿಶೇಷವಾಗಿ ಸಕ್ಕರೆ ಖಾಯಿಲೆ ನಮ್ಮ ದೇಶದ ಜನರಿಗೆ ಹೆಚ್ಚಿಗೆ ಬರುತ್ತಿದೆ. ಇದಕ್ಕೆ ಕಾರಣವೇನು? ಸಕ್ಕರೆ ಕಾಯಿಲೆಯನ್ನು ತಡೆಗಟ್ಟಲು ಯಾವ ಉಪಾಯ ಕಂಡುಹಿಡಿಯಲಾಗಿದೆ ಎಂಬುದಕ್ಕೆ ಉತ್ತರಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಸಾಮಾನ್ಯವಾಗಿ ಊಟ ಮಾಡುವಾಗ ತುಪ್ಪ ಜಾಸ್ತಿ ಉಪಯೋಗಿಸುವವರಲ್ಲಿ ಈ ಸಕ್ಕರೆ ಖಾಯಿಲೆ ಕಂಡು ಬರುತ್ತದೆ. ಈ ಕಾಯಿಲೆ ತಡೆಗಟ್ಟಬೇಕಾದರೆ ಕಸರತ್ತು ಮಾಡಿದರೆ ಕಡಿಮೆಯಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಈ ಕಾಯಿಲೆ ರಾಜಕಾರಣಿಗಳಾದವರಿಗೆ ಹೆಚ್ಚು-ಕಡಿಮೆ ಇದ್ದೇ ಇರುತ್ತದೆಂದು ಹೇಳುತ್ತಾರಲ್ಲಾ ಈ ಕುರಿತು ನಿಮ್ಮ ಅನುಭವವೇನು?

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಗೌಡ: ಅವರಿಗೆ ಈ ಕಾಯಿಲೆ ಇದೆಯೋ? ಇಲ್ಲವೋ?

ಶ್ರೀ ಜಗದೀಶ್ ಶೆಟ್ಟರ್: ರಾಜಕಾರಣಿಗಳಿಗೆ ಸಕ್ಕರೆ ಖಾಯಿಲೆ ಇದ್ದೇ ಇರುತ್ತದೆ. ಏಕೆಂದರೆ, ನಾವು ಚಹ ಕೊಡಿ ಎಂದಾಗ 'ಶುಗರ್‌ಲೆಸ್' ಕೊಡಲೇ ಎಂದು ಕೇಳುತ್ತಾರೆ. ಆಗ ನಾವು ಶುಗರ್ ಕೊಡಿ ಎಂದು ಕೇಳಬೇಕಾಗುತ್ತದೆ. ಇದು ಸಾಮಾನ್ಯವಾಗಿ ಬಿಟ್ಟಿದೆ. ರಾಜಕಾರಣಿಗಳಾದವರು ಎಲ್ಲಿಗಾದರೂ ಹೋದಾಗ ಶುಗರ್‌ಲೆಸ್ ಟೀ ಅಥವಾ ಕಾಫಿ ಹೇಳುತ್ತಾರೆ.

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಗೌಡ: ನೀವೇಕೆ milkless ಕುಡಿಯುತ್ತಿರಿ?

ಶ್ರೀ ಕಾಗೋಡು ತಿಮ್ಮಪ್ಪ: ಈ ಸಕ್ಕರೆ ಕಾಯಿಲೆ, ಆಹಾರದಲ್ಲಿ ಹೆಚ್ಚು ಪ್ರಮಾಣದಲ್ಲಿ ತುಪ್ಪ ಉಪಯೋಗಿಸುವುದರಿಂದ ಬರತಕ್ಕಂಥಾದ್ದು. ಇದರ ಜೊತೆಗೆ ಮಾನಸಿಕವಾಗಿ ಚಿಂತೆ ಮಾಡುವಂತಹವರಿಗೂ ಈ ಕಾಯಿಲೆ ಬರುವುದು ಸ್ವಾಭಾವಿಕವಾಗಿದೆ. ಸದರಿ ಕಾಯಿಲೆಯ ಚಿಕಿತ್ಸೆಗೆ ಈಗಾಗಲೇ ಅಗತ್ಯವಾಗಿರುವ ಔಷಧಿಗಳನ್ನು ಕಂಡುಹಿಡಿದಿದ್ದಾರೆ. ಈ ಕುರಿತಂತೆ ರಾಷ್ಟವ್ಯಾಪ್ತಿ ಖಚಿತವಾದ ಸಮೀಕ್ಷೆ ನಡೆದಿಲ್ಲ. ಕೆಲವು ತಜ್ಞರು ನಡೆಸಿರುವ ಅಧ್ಯಯನದ ವರದಿ ಪ್ರಕಾರ ನಗರ ಪ್ರದೇಶದ ಜನರಲ್ಲಿ ಶೇಕಡ 12.4 ಹಾಗೂ ಗ್ರಾಮಾಂತರ ಪ್ರದೇಶದ ಜನರಲ್ಲಿ ಶೇಕಡ 7.5ರಷ್ಟು ಮಧುಮೇಹ ರೋಗ ಇರುವುದಾಗಿ ಅಂದಾಜು ಮಾಡಲಾಗಿದೆ. ನಮ್ಮ ರಾಜ್ಯದಲ್ಲಿ ವಿಶೇಷವಾಗಿ ಹಾಸನ, ದಕ್ಷಿಣ ಕನ್ನಡ, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ಮಧುಮೇಹ ರೋಗಗಳಿರುವುದು ಕಂಡುಬಂದಿದೆ. ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ urine test ಮತ್ತು blood testಗೆ ಅಗತ್ಯವಾದ ವ್ಯವಸ್ಥೆಗಳನ್ನು ಮಾಡಿದ್ದೇವೆ ಮತ್ತು ಇದಕ್ಕೆ ಬೇಕಾದ technicians ಸಹ ನೇಮಿಸಲಾಗಿದೆ. ಆದುದರಿಂದ, ಈ ಬಗ್ಗೆ ಜನರಿಗೆ ತಿಳಿವಳಿಕೆ ನೀಡಲು ಸ್ವಲ್ಪ ಪ್ರಚಾರದ ಕಾರ್ಯವನ್ನು ಈಗ ನಡೆಸಿದ್ದೇವೆ.

ಶ್ರೀ ಎನ್. ಯೋಗೀಶ್ ಭಟ್: ರೇಟ್ ಕಂಟ್ರಾಕ್ಟ್‌ನಲ್ಲಿ ಇನ್ಸುಲಿನ್ ಔಷಧಿಯನ್ನು ಸೇರಿಸಿರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಈ ಕಾಯಿಲೆಯ ಚಿಕಿತ್ಸೆಗೆ ಬೇಕಾಗುವ ಔಷಧಿಗಳನ್ನು ಕೂಡ ಕೊಟ್ಟಿದ್ದೇವೆ. 2002-03ರಲ್ಲಿ ಒಟ್ಟು 12,47,129 ರೂಪಾಯಿ ಮತ್ತು 2003-04ರಲ್ಲಿ ಏಪ್ರಿಲ್‌ನಿಂದ ಇಲ್ಲಿಯವರೆಗೆ 1,83,801 ರೂಪಾಯಿಗಳನ್ನು ಔಷಧಿ ಸರಬರಾಜಿಗಾಗಿ ಬಿಡುಗಡೆ ಮಾಡಿದ್ದೇವೆ.

ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್: ಸಕ್ಕರೆ ಕಾಯಿಲೆಯನ್ನು ಹೋಗಲಾಡಿಸಲು ಹೋಮಿಯೋಪತಿ ಮತ್ತು ಆಯುರ್ವೇದಿಕ್ ವೈದ್ಯ ಪದ್ಧತಿಯಲ್ಲಿ ಬಹಳಷ್ಟು ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ಆದಕಾರಣ, ಈ ದಿಸೆಯಲ್ಲಿ ರೋಗವನ್ನು ತಡೆಗಟ್ಟಲು ಹೋಮಿಯೋಪತಿ ಮತ್ತು ಆಯುರ್ವೇದಿಕ್ ಔಷಧಿಗಳನ್ನು ಉಪಯೋಗಿಸಲು ಸರ್ಕಾರ ಪ್ರಯತ್ನಿಸಿದೆಯೇ ತಿಳಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ: ಸಕ್ಕರೆ ಕಾಯಿಲೆ ತಡೆಗಟ್ಟಲು ಅಗತ್ಯವಾದ ಔಷಧಿಗಳನ್ನು ಹೋಮಿಯೋಪತಿ ಮತ್ತು ಅಲೋಪತಿಯಲ್ಲೂ ಇದೆ. ಉದಾಹರಣೆಗೆ, ಗೈಬೆನ್‌ಕ್ಲಮೈಡ್, ಗೈಕ್ಲಜೈಡ್, ಗೈಪಿಜೈಡ್, ಮೆಟ್ಫಾರ್ಮಿನ್ ಇಂತಹ ಔಷಧಿಗಳನ್ನು ಕಂಡುಹಿಡಿಯಲಾಗಿದೆ.

ಶ್ರೀ ಆರಗ ಜ್ಞಾನೇಂದ್ರ: ರಾಜ್ಯದ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಘಟಕಗಳಲ್ಲೂ ಎಲೆಕ್ಟಾನಿಕ್ ಗ್ಲೂಕೋ ಮೀಟರ್‌ಗಳನ್ನಿಡುವ ವ್ಯವಸ್ಥೆ ಮಾಡಿದರೆ ಬಹಳ ಒಳ್ಳೆಯದು. ಬಡವರಿಗೆ ಬ್ಲಡ್ ಟೆಸ್ಟ್ ಮಾಡಿಸುವುದು ಬಹಳ ಕಾಸ್ಟಲಿ ಆಗುತ್ತದೆ. ಆದುದರಿಂದ, ರಾಜ್ಯದ ಎಲ್ಲಾ ಪಿಹೆಚ್‌ಸಿ ಮತ್ತು ಪಿಹೆಚ್‌ಯುಗಳಲ್ಲಿ ಈ ಚಿಕ್ಕ ಉಪಕರಣದ ಸೌಲಭ್ಯ ಒದಗಿಸಿಕೊಟ್ಟರೆ ತಕ್ಷಣವೇ ಫಲಿತಾಂಶ ಗೊತ್ತಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ಲಿಟ್ಮಸ್ ಅನ್ನು ಪ್ರತಿ ಸಬ್ ಸೆಂಟರ್‌ಗಳಲ್ಲಿ ಇಟ್ಟಿದ್ದೇವೆ.

ಶ್ರೀ ಆರಗ ಜ್ಞಾನೇಂದ್ರ: ಅದು urine testಗೆ ಉಪಯೋಗವಾಗುತ್ತದೆ. Blood Sugarಗೆ ಗ್ಲುಕೋಮೀಟರ್ ಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ಲಿಟ್ಮಸ್ ಉಪಕರಣದಿಂದಲೂ blood sugar ಟೆಸ್ಟ್ ಮಾಡಬಹುದು. ಮಾನ್ಯ ಸದಸ್ಯರು ನೀಡಿರುವ ಸಲಹೆಯನ್ನು ಪರಿಶೀಲಿಸುತ್ತೇನೆ.

ಗುಲ್ಬರ್ಗಾ ಜಿಲ್ಲೆಯ ಕಮಲಾಪೂರ ವಿಧಾನಸಭಾ ಕ್ಷೇತ್ರದಲ್ಲಿನ ಆರೋಗ್ಯ ಕೇಂದ್ರಗಳ ಸ್ಥಿತಿಗತಿ ಹಾಗೂ ಸಿಬ್ಬಂದಿ

453 (3848) ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆ ಕಮಲಾಪುರ ಕ್ಷೇತ್ರದಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕಗಳೆಷ್ಟು; ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳೆಷ್ಟು; ವಿವರ ನೀಡುವುದು;

ಆ) ಇಂತಹ ಆಸ್ಪತ್ರೆಗಳಲ್ಲಿ ಸಾಕಷ್ಟು ವೈದ್ಯರ ಹಾಗೂ ವೈದ್ಯೇತರ ಸಿಬ್ಬಂದಿಗಳ ಕೊರತೆ ಇರುವುದು ಕಂಡು ಬಂದಿದೆ; ಬಂದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ;

ಇ) ಇಂತಹ ಎಷ್ಟು ಹುದ್ದೆಗಳು ಖಾಲಿ ಇವೆ; ಯಾವಾಗ ಭರ್ತಿ ಮಾಡಿಕೊಳ್ಳಲಾಗುತ್ತದೆ;

ಈ) ಈ ಪ್ರದೇಶ ವ್ಯಾಪ್ತಿಯಲ್ಲಿ ಅಗತ್ಯವಾಗಿರುವ ಹೆಚ್ಚಿನ ಆಸ್ಪತ್ರೆಗಳನ್ನು ಮಂಜೂರು ಮಾಡಲು ಸರ್ಕಾರ ಯೋಚಿಸಿದೆಯೇ; ಇದ್ದರೆ ಎಲ್ಲೆಲ್ಲಿ;

ಉ) ಬೆಳಮಗಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸುವ ವಿಚಾರ ಯಾವ ಹಂತದಲ್ಲಿದೆ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಒಂದು – ಪ್ರಾಥಮಿಕ ಆರೋಗ್ಯ ಘಟಕ ಕಿಣ್ಣಿಸುಲ್ತಾನ

9 – ಪ್ರಾಥಮಿಕ ಆರೋಗ್ಯ ಕೇಂದ್ರಗಳು:

1. ಕಮಲಾಪುರ
2. ಸೊಂತ್
3. ನರೋಣ
4. ಡೊಂಗರಗಾಂವ್
5. ಅಂಬಲಗಾ
6. ಕಲ್ಲಾಲಿಂಗರಗಾ
7. ವಿ.ಕೆ. ಸಲಗರ